

ಸಾಮಾನ್ಯವಾಗಿ ಮೆಟ್ರೊ ಸ್ಟೇಷನ್ ನೆಲದಡಿಯಲ್ಲಿ ಕೆಲವೇ ಅಂತಸ್ತುಗಳಿಗಿಂತ ಹೆಚ್ಚು ಆಳದವರೆಗೆ ಇರಲಾರದು. ಆದರೆ ಕೆಲವು ಬಾರಿ ಆ ಸ್ಥಳದ ಭೌಗೋಳಿಕ ಲಕ್ಷಣಗಳ ಕಾರಣದಿಂದಾಗಿ ಉದಾಹರಣೆ ನದಿ, ಜೌಗು ಭೂಮಿ ಮುಂತಾದವು ಇಂಜಿನಿಯರ್‌ಗಳನ್ನು ತುಂಬಾ ಆಳದವರೆಗೆ ಹೋಗುವಂತೆ ಮಾಡುತ್ತದೆ. ಉಕ್ರೇನಿನ ಕೈವ್ ಮೆಟ್ರೊದ ಅರ್ಸನಲ್‌ನ ಸ್ಟೇಷನ್ ಮಾತ್ರ ಇದಕ್ಕೆ ಹೊರತಾಗಿದೆ.

ಅರ್ಸನಲ್‌ನ ಸ್ಟೇಷನ್, ನೆಲಮಟ್ಟದಿಂದ 105.5 ಮೀಟರ್ (346 ಅಡಿ)ಗಳಷ್ಟು ಕೆಳಗಿದೆ. ಇದು ಇಡೀ ಜಗತ್ತಿನಲ್ಲಿಯೇ ಅತ್ಯಂತ ಕೆಳಭಾಗದಲ್ಲಿರುವ ಮೆಟ್ರೊ ಸ್ಟೇಷನ್ ಎಂಬ ಖ್ಯಾತಿಗೆ ಪಾತ್ರವಾಗಿದೆ. ಪ್ರಯಾಣಿಕರು ಈ ಸ್ಟೇಷನ್‌ನಲ್ಲಿರುವ ಸಬ್ ವೇ ರೈಲನ್ನು ಹತ್ತಬೇಕೆಂದರೆ, ನೋಡಿದರೆ ತುದಿಯೇ ಕಾಣದಿರುವಂತಹ ಎರಡು ಎಸ್ಕಲೇಟರ್‌ಗಳನ್ನು ಬಳಸಿಕೊಳ್ಳಬೇಕು. ಈ ಪಯಣಕ್ಕೆ 5 ನಿಮಿಷಗಳಷ್ಟು ಕಾಲಾವಧಿ ಬೇಕಾಗುತ್ತದೆ. ಸ್ಟೇಷನ್‌ನ ದ್ವಾರವು, ಡ್ನೈಪರ್ ನದಿಯ ಪಕ್ಕದಲ್ಲಿರುವ ಕಡಿದಾದ ಕಣಿವೆಯ ಮೇಲಿದೆ.

1960 ರ ನವೆಂಬರ್ 6 ರಂದು ನಿರ್ಮಾಣಗೊಂಡಿರುವ ಈ ಮೆಟ್ರೊ ಸ್ಟೇಷನ್ ಅಕ್ಷರಶಃ ಪಾತಾಳದಲ್ಲಿದೆ.

■ ವಿದ್ಯಾ ವಿ. ಹಾಲಭಾವಿ

# ಪಾತಾಳದಲ್ಲಿ ಮೆಟ್ರೊ ಸ್ಟೇಷನ್..!

